INTRODUCTION

SRI S. M. YAHYA (Minister for Finance).—I beg to move :

" That leave be granted to introduce the Karnataka Entertainments Tax (Amendment) Bill, 1979.

MADAM DEPUTY SPEAKER.—The question is :—

" That leave be granted to introduce the Karnataka Entertainments Tax (Amendment) Bill, 1979. "

The motion was adopted and leave was granted

SRI S. M. YAHYA.—I introduce :

" The Karnataka Entertainments Tax (Amendment) Bill, 1979. "

MADAM DEPUTY SPEAKER.—The Bill is introduced. * *

Motion to consider

† SRI S. M. YAHYA.—Motion to consider, I beg to move :

" That the Karnataka Entertainments Tax (Amendment) Bill, 1979 be taken into consideration. "

The question was proposed.

This is not a money Bill. Recently we have rationalised the policy of film exemption. According to the Act, certain categories of films cannot be given exemption. This year being 'Children Year', we would like to give entertainment tax exemption to certain films. Further, there are certain films which would get State and Central awards also. Such films will also be considered to give tax exemption. Some of these categories of films are included in this so that the Government will have power to give tax exemption in certain cases. Recently we have classified the films and for 'A' films we have doubled the tax also. This classification is made according to the Censor Board. This is the first time we have taken the Censor Board's classification, and we would like to discourage violence films, sex films, and so on. This classification is made for the first time in India for which we have doubled the tax also.

There are representations that the ticket rates have gone up to Rs. 7, Rs. 6 and so on. Therefore, the Government is taking power and if need be we can give certain relief. This is a Bill to give wherever possible certain relief ; it is not a revenue Bill. To enforce this, no extra staff is necessary. We may give relief especially to Kannada films in places where the population is less than 20,000. In this way we would like to help the Film Industry.

* * Bill is appended as annexure to this volume

† ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಉಪಾಧ್ಯಕ್ಷರೇ, ಪ್ರಥಮದಲ್ಲಿ ನಾನೊಂದು ಸಣ್ಣ ಸೂಚನೆಯನ್ನು ಮಾಡಬಯಸುತ್ತೇನೆ. ಅದೇನೆಂದರೆ, ಮಾನ್ಯ ಯಾಹ್ಯಾ ಅವರನ್ನು ಹಣಕಾಸು ಸಚಿವರೆಂದು ಕರೆಯುವುದಕ್ಕಿಂತ ತೆರಿಗೆ ಸಚಿವರೆಂದು ಕರೆದುಬಿಟ್ಟರೆ ಚೆನ್ನಾಗಿರುತ್ತಿತ್ತು !

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಚರಣ್ ಸಿಂಗ್ ಅವರನ್ನೂ ಹಾಗೆ ಕರೆಯಬೇಕು !

SRI S. M. YAHYA.—I thought Mr. Bommai is a very bold man and he could shoulder all the taxes.

SRI S. R. BOMMAI.—Boldness does not go with riches. ಬೊಮ್ಮಾಯಿ ಯವರು ತೆರಿಗೆ ಭಾರವನ್ನು ಹೊರಬಹುದು, ಇಲ್ಲವೆಂದು ಹೇಳುವುದಿಲ್ಲ. ಆದರೆ, ಮಾನ್ಯ ಯಾಹ್ಯಾ ಅವರು ಶ್ರೀಸಾಮಾನ್ಯನ ಮೇಲೆ ಕರದ ಹೊರೆ ಹೆಚ್ಚಿಸುವ ಮಂತ್ರಿಗಳಾಗಿದ್ದಾರೆ ? ಈ ಪ್ರಸಂಗದಲ್ಲಿ ಅದು ಬೇಡ. ಸರ್ಕಾರ ನೀತಿಗನುಗುಣವಾಗಿ, ಸೆನ್ಸಾರ್ ಮಂಡಲಿಯವರು ''ಎ'' ಎಂದು ವರ್ಗೀಕರಿಸಲ್ಪಟ್ಟ ಚಲನಚಿತ್ರಗಳಿಗೆ ಈಗ ವಿಧಿಸಿರುವ ತೆರಿಗೆಯನ್ನು ದ್ವಿಗುಣ ಮಾಡಲಾಗಿದೆ. ಇದರ ಪರಿಣಾಮವಾಗಿ ಸಾಮಾನ್ಯ ಜನರು ಅತ್ಯಂತ ಅವಶ್ಯವಾದ ಮತ್ತು ಅಲ್ಪ ಖರ್ಚಿನಿಂದ ಪಡೆಯುತ್ತಿದ್ದ ಮನರಂಜನೆಯನ್ನು ಸರ್ಕಾರ ಕಸಿದುಕೊಂಡಂತಾಗಿದೆ. ಕರಭಾರಗಳಿಂದಾದ ತೊಂದರೆಗಳನ್ನು ನೀಗಿಕೊಳ್ಳಲು ಸಿನಿಮಾ ನೋಡುತ್ತಿದ್ದವರ ಮೇಲೆ ಇಂದು ತೆರಿಗೆಯನ್ನು ದ್ವಿಗುಣ ಮಾಡಲಾಗಿದೆ. ''ಎ'' ಚಲನಚಿತ್ರಗಳನ್ನು ಶ್ರೀಮಂತರು ಮಾತ್ರ ನೋಡಬೇಕೆ ? ಮೇಲ್ಮಟ್ಟದವರು ಮಾತ್ರ ನೋಡಬೇಕೆ ? ಈ ಚಿತ್ರಗಳನ್ನು ವಯಸ್ಕರು ಮಾತ್ರ ನೋಡುತ್ತಾರೆಂದರೆ, ವಯಸ್ಕರೆಲ್ಲ ಶ್ರೀಮಂತರು, ಬಡವರು ವಯಸ್ಕರಲ್ಲ ಎಂದು ಅರ್ಥವೇ ? ಆದುದರಿಂದ, ಈ ಚಲನಚಿತ್ರಗಳ ಮೇಲೆ ಮನರಂಜನೆ ತೆರಿಗೆಯನ್ನು ಎರಡುಪಟ್ಟು ಮಾಡಿದ್ದು ಸರಿಯಲ್ಲ. ಈ ವಿಚಾರವನ್ನು ಸರ್ಕಾರ ಕೂಡಲೇ ಆಲೋಚನೆ ಮಾಡಬೇಕು. ಇಲ್ಲದೇ ಹೋದರೆ, ಶ್ರೀಮಂತರು ಮೇಲ್ವರ್ಗದವರು ಮಾತ್ರ ಉತ್ತಮ ಸಿನಿಮಾ ನೋಡಲಿಕ್ಕೆ ಅರ್ಹರು ಉಳಿದವರು ಅರ್ಹರಲ್ಲ ಎನ್ನುವ ಭಾವನೆ ಮೂಡುತ್ತದೆ. ಇದಕ್ಕೆ ಸರ್ಕಾರ ಅವಕಾಶ ಕೊಡಬಾರದು. ಸಾಮಾನ್ಯ ಕೂಲಿಕಾರನಿಗೂ ಸಿನಿಮಾ ಮನರಂಜನೆಯ ಅವಕಾಶ ಸಿಗುವಂತ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಮನರಂಜನೆಗೆ ಸಿನಿಮಾ ಬಿಟ್ಟರೆ ಬೇರೆ ಅವಕಾಶ ಇಲ್ಲ.

ಇದೇ ಸಮಯದಲ್ಲಿ ೨೦,೦೦೦ ಕ್ಕಿಂತ ಕಡಿಮೆ ಜನಸಂಖ್ಯೆ ಇರತಕ್ಕ ನಗರಗಳಿಗೆ ಕೆಲವು ರಿಯಾಯಿತಿಗಳನ್ನು ತೋರಿಸಿದ್ದೀರಿ. ಆದರೆ, ರಿಯಾಯಿತಿ ತೋರಿಸುವಾಗ ಒಂದು ಪ್ರದರ್ಶನಕ್ಕೆ ಇಷ್ಟು ಕರ ಅಂತ ಹಾಕಿದ್ದೀರಿ. ಸಿನಿಮಾ ನೋಡಲಿಕ್ಕೆ ೫೦ ಜನ ಬರಲಿ, ೧೦೦ ಜನ ಬರಲಿ, ೨೦೦ ಜನ ಬರಲಿ, ಚಿತ್ರಮಂದಿರ ಭರ್ತಿ ಆಗಲೀ ತಾವು ನಿಗದಿ ಮಾಡಿರತಕ್ಕ ಕರಮಾತ್ರ ಕೊಡಬೇಕು, ಇದು ಸರಿಯಲ್ಲ. ಇದರ ಒಂದು ಪರಿಣಾಮ ಚಿಕ್ಕ ನಗರಗಳಲ್ಲಿರತಕ್ಕ ಚಿತ್ರಮಂದಿರಗಳ ಮೇಲೆ ಬಾರಿ ಪೆಟ್ಟು ಬೀಳುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಕೆಲವರು ೬ ಗಂಟೆಗೆ ಸಿನಿಮಾ ನೋಡಲಿಕ್ಕೆ ಬರುತ್ತಾರೆ, ಕೆಲವರು ೯ ಗಂಟೆಗೆ ಸಿನಿಮಾ ನೋಡಲಿಕ್ಕೆ ಬರುತ್ತಾರೆ. ಈ ವಿಚಾರವನ್ನು ಸರ್ಕಾರ ಮತ್ತೇ ಪರಿಶೀಲನೆ ಮಾಡುವುದು ಅವಶ್ಯಕ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್‌ಸಲ್ಲಿ ಈ ರೀತಿ ಹೇಳಿದ್ದಾರೆ.—

'' In order to augment the revenues of the State, the Karnataka Taxation and Certain Other Laws (Amendment) Act, 1979, has been brought into force.

According to the said Act, the tax has been increased by hundred per cent on Films which are granted 'A' certificate. Several representations have been received to reduce the same. Government propose to retain the power to make a reduction in the tax payable on 'A' Certificate Films. '' ಎಂದು ಇದು ಮುಖ್ಯವಾದ ವಿಚಾರ.

ಇಲ್ಲಿದೆ ಮುಖ್ಯವಾದ ವಿಚಾರ. ರಿಯಾಯಿತಿ ಕೊಡಬೇಕು, ಕೊಡಬಾರದು ಎನು ವ ಬಗ್ಗೆ ಸಂಪೂರ್ಣವಾದ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳುವುದು ಸರಿಯಲ್ಲ. ತೆರಿಗೆ ವಿನಾಯಿತಿ ನೀಡು

ವಾಗ ಅನೇಕ ಉತ್ತಮ ಸಿನಿಮಾಗಳಿಗೆ ತೆರಿಗೆ ವಿನಾಯಿತಿ ದೊರೆಯುದೇ ಇರುವುದನ್ನು ನಾವು ಈಗಾಗಲೇ ನೋಡಿದ್ದೇವೆ. ರಾಜಕೀಯ ಒತ್ತಡ, ವರ್ಚಸ್ಸು ಇದ್ದಂತಹವರು ಎಂತಹ ಸಿನಿಮಾ ತೆಗೆದರೂ ತೆರಿಗೆ ವಿನಾಯಿತಿ ಸಿಗುವಂತ ಉದಾಹರಣೆಗಳು ಬೇಕಾದಷ್ಟು ಇವೆ. ಸಿನಿಮಾ ಜಗತ್ತನ್ನು ನೋಡಿದಾಗ ಈ ವಿಚಾರ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದುದರಿಂದ ಸರ್ಕಾರ ಅಧಿಕಾರವನ್ನು ತನ್ನ ಕೈಯಲ್ಲಿಟ್ಟು ಕೊಳ್ಳದೆ, ಸಿನಿಮಾ ಉದ್ಯಮದಲ್ಲಿರತಕ್ಕ ಅನುಭವಿಗಳು, ತಜ್ಞರೂ ಸರ್ಕಾರದ ಅಧಿಕಾರಿಗಳು ಇರುವಂತ ಒಂದು ಸಮಿತಿಯನ್ನು ನೇಮಕಮಾಡಿ, ಆ ಒಂದು ಸಮಿತಿಗೆ ಅಧಿಕಾರ ಕೊಟ್ಟು, ಆ ಸಮಿತಿಯವರು ಮೆರಿಟ್‌ಮೇಲೆ ಚಿತ್ರಗಳನ್ನು ಪರೀಕ್ಷೆ ಮಾಡಿ ತೆರಿಗೆ ವಿನಾಯಿತಿ ಕೊಡುವಂತ ವ್ಯವಸ್ಥೆಯಾಗಬೇಕು. ತಾವು ತಂದಿರತಕ್ಕ ತಿದ್ದುಪಡಿ ಮಸೂದೆಯ ಸೆಕ್ಷನ್ (೪) ಎ ನಲ್ಲಿ ಏನು ಹೇಳಿದ್ದೀರಿ : ಆ ವಿಚಾರವನ್ನು ನ್ಯಾಯವಾಗಿ ವಿಚಾರ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. 'ಎ' ಸರ್ಟಿಫಿಕೇಟ್ ಕೊಡುವ ವಿಚಾರ ದಲ್ಲಿಯೂ ಒಂದು ಸಮಿತಿ ಮಾಡಿ ಅದಕ್ಕೆ ಅಧಿಕಾರ ವಹಿಸಬೇಕೆಂದು ಹೇಳುತ್ತೇನೆ.

ಕನ್ನಡ ಚಿತ್ರಗಳಿಗೆ ತೆರಿಗೆ ವಿನಾಯಿತಿ ಕೊಡುವುದನ್ನು ನಿಲ್ಲಿಸಿದ್ದೀರಿ ; ಆದರೆ, ಸಬ್ಸಿಡಿ ಕೊಡ ತಕ್ಕದ್ದು ಮುಂದುವರಿದಿದೆ. ಸ್ವಾಮಿ, ಸಬ್ಸಿಡಿ ಹಣ ಕೊಡುವ ವಿಚಾರದಲ್ಲಿ ನಿದಾನವಾಗುವುದಕ್ಕೆ ಕಾರಣ ಏನು ? ಸಿನಿಮಾ ತೆಗೆದು ಅದು ಪ್ರದರ್ಶನಕ್ಕೆ ಹೋಗಿ ೧-೨ ವರ್ಷಗಳಾದರೂ ಸಬ್ಸಿಡಿ ಹಣ ಸಿಗುವುದಿಲ್ಲ ; ಈ ಉದ್ದಿಮೆಯಲ್ಲಿರತಕ್ಕ ಅನೇಕ ಜನ ಬಂದು ನಮಗೆ ಹೇಳುತ್ತಾರೆ. ಅಧಿಕಾರಿಗಳನ್ನು ಕೇಳಿದರೆ ಜಾರಿಕೆಯ ಉತ್ತರ ಕೊಡುತ್ತಾರೆ. ಲಕ್ಷಾಂತರ ರೂಪಾಯಿಗಳನ್ನು ಚಲನಚಿತ್ರಗಳ ಮೇಲೆ ಹಾಕಿ ಚಿತ್ರಗಳನ್ನು ತೆಗೆದು ಚಿತ್ರಗಳು ಪ್ರದರ್ಶನಕ್ಕೆ ಹೋದರೂ ಹಣ ಸಿಗದೇ ಹೋದರೆ ಸರ್ಕಾರ ಈ ಉದ್ದಿಮೆಯಲ್ಲಿರತಕ್ಕವರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆಯೆ ? ಈ ರೀತಿಯ ಒಂದು ಧೋರಣೆ ಇರುವುದರಿಂದ ಈ ಉದ್ದಿಮೆಯಲ್ಲಿರತಕ್ಕವರಿಗೆ ಚಿತ್ರಗಳನ್ನು ತಯಾರು ಮಾಡಲಿಕ್ಕೆ ಉತ್ಸಾಹ ಇರುವುದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಗುಜರಾತ್ ರಾಜ್ಯದಲ್ಲಿ ಸಬ್ಸಿಡಿ ಕೊಡುತ್ತಿಲ್ಲ ;ಆದಕ್ಕೆ ಬದಲಾಗಿ ತೆರಿಗೆ ವಿನಾಯಿತಿ ಮಾಡಿದ್ದಾರೆ. ಈ ರೀತಿ ಮಾಡುವುದರಿಂದ ಎರಡು ರೀತಿಯಲ್ಲಿ ಲಾಭ ಇದೆ. ಒಂದು ಉತ್ತಮ ಮಟ್ಟದ ಚಿತ್ರಗಳು ಬರುವುದು ; ಜನ ಕೂಡ ಹಚ್ಚು ಹೆಚ್ಚು ನೋಡುವುದಕ್ಕೆ ಇಷ್ಟಪಡುತ್ತಾರೆ. ಅಲ್ಲದೆ, ಸಬ್ಸಿಡಿ ಸಿಗುತ್ತದೆಂಬ ಆಸೆಯಿಂದ ೪-೫ ಜನ ಕೂಡಿಕೊಂಡು ಮಾಬಾದಂತೆ ಚಿತ್ರಗಳನ್ನು ತೆಗೆಯುವುದನ್ನು ತಪ್ಪಿಸಿದಂತಾಗುತ್ತದೆ. ಇನ್ನೊತ್ತು ನಮ್ಮ ರಾಜ್ಯದಲ್ಲಿ ಎಂತ ಸಿನಿಮಾ ತೆಗೆದರೂ ಕೂಡ ಸಬ್ಸಿಡಿ ಸಿಗುತ್ತದೆನ್ನುವ ಭಾವನೆ ಬೆಳೆದು ಬಂದಿದೆ. ಆದುದರಿಂದ ಸಬ್ಸಿಡಿ ಕೊಡುವುದಕ್ಕೆ ಬದಲಾಗಿ ಎಲ್ಲ ಕನ್ನಡ ಚಿತ್ರಗಳಿಗೂ ಟ್ಯಾಕ್ಸ್ ಫ್ರೀ ಮಾಡಿ ; ಆ ಮೂಲಕ ಉತ್ತಮ ಚಿತ್ರಗಳು ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರಿಂದ ಒಳ್ಳೆಯ ಮಾರ್ಪಾಟ್ಟಿ ದೊರೆಯುವುದಲ್ಲದೆ ; ಲಾಭದಾಯಕವಾಗಿಯೂ ಇರುತ್ತದೆ. ಮಾನ್ಯ ಮಂತ್ರಿಗಳೂ ಕೂಡಲೇ ಇಂತಹ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ) —ಸನ್ಮಾನ್ಯ ಸಭಾಧ್ಯಕ್ಷರೇ, ಸಾಧಾರಣವಾಗಿ ತೆರಿಗೆ ಹಾಕತಕ್ಕ ಮಸೂದೆ ಬಂದಾಗ ವಿರೋಧಿಸುವವರ ಪೈಕಿ ನಾನು ಒಬ್ಬ. ಈ ಮಸೂದೆಯ ಬಗ್ಗೆ ಮುಖ್ಯ ವಿರೋಧ ಇಷ್ಟೆ. ಸರ್ಕಾರ ಸ್ಥಳೀಯ ಸಂಸ್ಥೆಗಳಿಗೆ ಇರತಕ್ಕ ಲಾಭದ ವರಮಾನದಲ್ಲಿ ಕೈಹಾಕಿ ಸ್ಥಳೀಯ ಸಂಸ್ಥೆಗಳಿಗೆ ಅನ್ಯಾಯ ಮಾಡುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ಥಳೀಯ ಸಂಸ್ಥೆಗಳಿಗೆ ಬರತಕ್ಕ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಕೂಡ ಸರ್ಕಾರವೇ ಕಿತ್ತುಕೊಂಡಿದೆ: ಇದರಿಂದ ೬ ಕೋಟಿ ರೂಪಾಯಿಗಳು ಸ್ಥಳೀಯ ಸಂಸ್ಥೆಗಳಿಗೆ ಸಿಗದಂತಾಯಿತು. ಈಗ ಮತ್ತೆ ಮನರಂಜನೆಯನ್ನು ತೆರಿಗೆ ಹಾಕತಕ್ಕ ಅಧಿಕಾರವನ್ನು ಸರ್ಕಾರವೇ ಕಿತ್ತುಕೊಂಡಿದೆ, ಹಿಂದೆ ಮನರಂಜನೆಯ ತೆರಿಗೆಯನ್ನು ಸ್ಥಳೀಯ ಸಂಸ್ಥೆಗಳು ಹಾಕಿ ೯೦ ಭಾಗ ಇಟ್ಟುಕೊಂಡು ೧೦ ಭಾಗವನ್ನು ಸರ್ಕಾರಕ್ಕೆ ಕೊಡುತ್ತಿದ್ದ ವ್ಯವಸ್ಥೆಯಿತ್ತು. ಸರ್ಕಾರ ಇಲ್ಲಿ ಪ್ರದರ್ಶನ ತೆರಿಗೆ ಹಾಗೂ ಸೀಟ್ ತೆರಿಗೆ ಇನ್ನು ನಾನಾರೀತಿಯ ತೆರಿಗೆಗಳನ್ನು ಹಾಕಿ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಮೊಟಕು ಮಾಡಿದೆ. ಸರ್ಕಾರದವರು ಅಡಿಷನಲ್ ಟ್ಯಾಕ್ಸ್ ತೆಗೆದುಕೊಳ್ಳುತ್ತೇವೆ ಎನ್ನುವ ವಾದ ಹೇಳಬಹುದು. ಸ್ಥಳೀಯ ಸಂಸ್ಥೆಗಳಿಗೆ ಈ ತೆರಿಗೆಯ ಅಧಿಕಾರವನ್ನು ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಸರ್ಕಾರ ಆ ರೀತಿ ಮಾಡದೆ ತನ್ನ ಬಲೆಯನ್ನು ಎಲ್ಲಾ ಕಡೆ ಬೀಸಿ, ಸ್ಥಳೀಯ ಸಂಸ್ಥೆಗಳಿಗೆ ತೊಂದರೆ ಮಾಡುವುದಕ್ಕೆ ಹೊರಟಿರುವುದರಿಂದ ಈ ಮಸೂದೆಯನ್ನು ವಿರೋಧಿಸಬೇಕಾಗಿದೆ. ಒಂದು ಕಡೆ ಹೆಂಡ ಕುಡಿಯುವವರ ಮೇಲೆ ಹಾಕತಕ್ಕ ತೆರಿಗೆ, ಸಿನಿಮಾ ಮೇಲೆ ಹಾಕತಕ್ಕ ತೆರಿಗೆ ಬಗ್ಗೆ ನನಗೆ ವ್ಯಥೆ ಇಲ್ಲ.

ಶ್ರೀ ಪಿ ರಾಂದೇವ್.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಾಮಣ್ಣನವರ ಮಗ ಸಿನಿಮಾ ತಯಾರು ಮಾಡುತ್ತಿದ್ದಾರೆ. ಅವಾರ್ಡ್ ಕೂಡ ಬಂದಿದೆ.

ಶ್ರೀ ಟಿ.ಆರ್. ಶಾಮಣ್ಣ.—ನನಗೆ ಸಿನಿಮಾ ಬಗ್ಗೆ ವಿರೋಧ ಇದ್ದರೂ ಕೂಡ ನನ್ನ ಮಗ ನನಗೆ ವಿರೋಧವಾಗಿ ಸಿನಿಮಾ ಪ್ರಪಂಚದಲ್ಲಿ ಇಳಿದಿದ್ದು ನನ್ನಿಂದ ದುಡ್ಡು ಕಾಸು ಖರ್ಚಾಗದೇ ಇದ್ದರೂ ನ್ಯಾಷನಲ್ ಅವಾರ್ಡ್ ತೆಗೆದುಕೊಂಡಿದ್ದರಿಂದ ನನಗೆ ಹೆಮ್ಮೆ ಇದೆ. ಆದರೆ ಅನೇಕ ಸಾರಿ ಎಕ್ಸಮಷನ್ ಕೊಡಿ ಎಂದು ಕೇಳುವ ಸಂದರ್ಭ ಬರಬಹುದು ಎಂದು ನನಗೆ ವ್ಯಥೆಯಾಗುತ್ತಿದೆ. ಇನ್ನು 'ಎ' ಕ್ಲಾಸ್ ಮತ್ತು ಬಿ' ಕ್ಲಾಸ್ ಯಾವರೀತಿ ಕ್ಲಾಸಿಫೈ ಮಾಡಿದ್ದೀರಾ? ಇದರ ಬಗ್ಗೆ ವಿವರಣೆ ಕೊಡಬೇಕು. ಇವೊತ್ತು ಸರ್ಕಾರ ಪೂರ್ತಿಯಾಗಿ ಡಿಸ್ಟ್ರಿಬ್ಯೂಷನರಿ ಪವರ್ ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ಅನೇಕರು ೧೦೦ ಪರ್ಸೆಂಟ್ ಹೆಚ್ಚಿಸಿದ್ದು ತಪ್ಪು ಎಂದು ಆರ್ಜಿಗಳನ್ನು ಕೊಟ್ಟಿದ್ದರೂ ಸರ್ಕಾರ ತನ್ನ ಕೈಯಲ್ಲಿ ಅಧಿಕಾರ ತೆಗೆದುಕೊಂಡು ತಮಗೆ ಇಷ್ಟಬಂದವರಿಗೆ ರಿಯಾಯಿತಿ ಕೊಡುವುದು ತಮಗೆ ಬೇಡವಾದವರಿಗೆ ಆಗುವುದಿಲ್ಲ ಎಂದು ಹೇಳುವ ಅಧಿಕಾರ ಇಟ್ಟುಕೊಂಡಿರುವುದು ಬಹಳ ತಪ್ಪು. ಇನ್ನು ಈ ತೆರಿಗೆಗಳು ಹೆಚ್ಚಾಗುವ ಸಂದರ್ಭಗಳಲ್ಲಿ ಲೀಕೇಜ್ ಆಗತಕ್ಕ ಸಂದರ್ಭಗಳು ಬಹಳ ಜಾಸ್ತಿ ಇರುತ್ತದೆ. ಇದರಲ್ಲಿ ಬರತಕ್ಕ ವರಮಾನ ಲೋಕಲ್‌ಬಾಡೀಸ್‌ಗೆ ಬರುವುದಾದರೂ ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಸ್ವಲ್ಪ ಅವಕಾಶ ಇಲ್ಲದೇ ಇದ್ದಾಗ ಈ ತೆರಿಗೆಯನ್ನು ತಪ್ಪಿಸಿ ಕೊಳ್ಳಲಿಕ್ಕೆ ಬೇರೆ ಟಿಕೆಟ್ ಪ್ರಿಂಟ್ ಮಾಡಿಸಿ ಈ ಸಿನಿಮಾ ಮಾಲೀಕರು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಸಿನಿಮಾ ನೋಡತಕ್ಕವರಿಗೆ ತೆರಿಗೆ ಹಾಕಿ ಅವರು ಇದರ ಬಗ್ಗೆ ಹೆಚ್ಚಿನ ಅನುಕೂಲ ಪಡೆಯುವುದು ಇದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಆಸಕ್ತಿ ವಹಿಸಿ ಈ ತೆರಿಗೆ ವಸೂಲಾತಿ ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೇ ಎಂದು ನೋಡಬೇಕು. ಇದು ಲೋಕಲ್ ಬಾಡೀಸ್‌ಗೆ ಸಂಬಂಧ ಪಟ್ಟಿದ್ದರಿಂದ ಸರ್ಕಾರಕ್ಕೂ ವರಮಾನ ಬರುತ್ತದೆ, ಆದುದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂಬು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಬ್ಸಿಡಿ ಬಗ್ಗೆ ನಮ್ಮ ರಾಜ್ಯದಲ್ಲಿ ಆಗತಕ್ಕ ಹಿಂದಿ, ಗುಜರಾತಿ, ತಮಿಳು, ಎಲ್ಲದಕ್ಕೂ ಸಬ್ಸಿಡಿ ಕೊಡುತ್ತೇವೆಂದು ಹೇಳುವುದರ ಬಗ್ಗೆ ಒಪ್ಪಲಿಕ್ಕೆ ಸೂಕ್ತವಾದುದಲ್ಲ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಸಿನಿಮಾಗಳಿಗೆ ಸರ್ಕಾರ ಹೆಚ್ಚಿನ ಆಶ್ರಯ ಕೊಡಬೇಕು ಅಂಥಾದ್ದರಲ್ಲಿ ಯಾವುದೋ ಸಿನಿಮಾಗಳಿಗೆ ಎಕ್ಸ್‌ಮ್‌ಷನ್ ಕೊಡುತ್ತೇವೆಂದು ಹೇಳುವುದು ಸೂಕ್ತವಲ್ಲ. It is being carried over year after year. ೧೦-೨೦ ಸಿನಿಮಾಗಳಿಗೆ ದುಡ್ಡು ಇಲ್ಲದೇ ಮುಂದಿನ ವರ್ಷದ ಬಜೆಟ್ಟಿನಲ್ಲಿ ಹಣ ಕೊಡುತ್ತೇವೆ ಎನ್ನುವ ಸಂದರ್ಭ ಬರಬಹುದು. ಆದುದರಿಂದ ಇದರ ಬಗ್ಗೆ ತಜ್ಞರ ಕಡೆ ಚರ್ಚಿಸಿ ಈ ಸಬ್ಸಿಡಿ ಕೊಡುವ ಬಗ್ಗೆ ಸರ್ಕಾರ ಸರಿಯಾದಂತಹ ನಿಲುವನ್ನು ತೆಗೆದುಕೊಳ್ಳಬೇಕು. ಇನ್ನು ಮಕ್ಕಳ ವರ್ಷ ಎಂದು ಹೇಳುತ್ತೀರಾ. ಮಕ್ಕಳಿಗೆ ಸಂಬಂಧಪಟ್ಟಂತೆ ಕೆಲವು ಇಂಟರ್‌ನ್ಯಾಷನಲ್ ವರ್ಷದಲ್ಲಿ ಮಾತ್ರ ಕೊಡುತ್ತೀರಾ ಅಥವಾ ಇದನ್ನೇ ಮುಂದುವರಿಸಿಕೊಂಡು ಹೋಗುತ್ತೀರಾ ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟರೆ ಒಳ್ಳೆಯದು. ಈಗ ನಾನು ಸರ್ಕಾರದಲ್ಲಿ ಅತ್ಯಂತ ವಿನಯಪೂರ್ವಕವಾಗಿ ಹೇಳತಕ್ಕದ್ದು ಏನೆಂದರೆ ಈ ಡಿಸ್ಟ್ರಿಬ್ಯೂಷನರಿಪವರ್ ತನ್ನ ಕೈಯಲ್ಲಿ ಇಟ್ಟುಕೊಳ್ಳತಕ್ಕದ್ದು ಒಳ್ಳೆಯದಲ್ಲ. ಇದರ ಬಗ್ಗೆ ಒಂದು ನೀತಿ ನಿಯಮ ಇಟ್ಟುಕೊಳ್ಳಬೇಕು. ಈಗ ಏನಾಗಿದೆ ಅಂದರೆ ಸರ್ಕಾರ ಈ ಡಿಸ್ಟ್ರಿಬ್ಯೂಷನರಿ ಪವರ್ ಇಟ್ಟುಕೊಂಡಿರುವುದರಿಂದ ಅವರಿಗೆ ಯಾರು ಅನುಕೂಲವಾಗಿದ್ದಾರೆ ಅಂತಹವರಿಗೆ ಮಾತ್ರ ಈ ಡಿಸ್ಟ್ರಿಬ್ಯೂಷನರಿ ಪವರ್‌ನಿಂದ ಎಕ್ಸಮ್‌ಷನ್ ಕೊಡತಕ್ಕ ವ್ಯವಹಾರ ಇದೆ. ಇದು ಸರಿಯಲ್ಲ. ದಯವಿಟ್ಟು ಒಂದು ನಿಯಮ ಮಾವಳಿ ಪ್ರಕಾರ ಕೊಡಬೇಕು. ಸರ್ಕಾರ ತನ್ನ ಇಷ್ಟ ಬಂದ ಹಾಗೆ ಡಿಸ್ಟ್ರಿಬ್ಯೂಷನರಿ ಪವರ್ ಉಪಯೋಗಿಸಿ ಎಕ್ಸಮ್‌ಷನ್ ಕೊಡತಕ್ಕದ್ದು ಸೂಕ್ತವಲ್ಲ ಎಂದು ಹೇಳುತ್ತೇನೆ. ಈ ತರಹ ಕಾಯಿದೆಗಳು ಅವಸರ ಅವಸರವಾಗಿ ಬರುತ್ತವೆ ಸಾಧಾರಣವಾಗಿ ನಮ್ಮ ರಾಜ್ಯದಲ್ಲಿ ಬರತಕ್ಕ ಅಮೆಂಡ್‌ಮೆಂಟ್ ಬಿಲ್ಲುಗಳಷ್ಟು ಬೇರೆ ಯಾವ ರಾಜ್ಯದಲ್ಲೂ ಬರುವುದಿಲ್ಲ. ಇವರು ಒಂದು ಬಿಲ್ಲು ತರುವಾಗ, ಆರ್ಡಿನೆನ್ಸ್ ಪಾಸ್ ಮಾಡುವಾಗ ಸ್ವಲ್ಪ ಎಚ್ಚರಿಕೆ ವಹಿಸಿ ಮಾಡಿದರೆ ಇಂತಹ ಅಮೆಂಡ್‌ಮೆಂಟ್ ಬಿಲ್ಲುಗಳು ಬರುವುದಿಲ್ಲ ಎಂದು ಕಾಣುತ್ತದೆ. ಇವೊತ್ತು ಎಕ್ಸಮ್‌ಷನ್ ಕೊಡಬೇಕಾದರೆ ಒಂದು ನಿಯಮ ಮಾಡಿಕೊಳ್ಳಬೇಕೆ ವಿನಹ ಮಂತ್ರಿಗಳ ಕೈಯಲ್ಲಿ ಅಥವಾ ಬೇರೆಯವರ ಕೈಯಲ್ಲಿ ಈ ಡಿಸ್ಟ್ರಿಬ್ಯೂಷನರಿ ಪವರ್ ಇಟ್ಟುಕೊಳ್ಳುವುದರಿಂದ ಅನುಕೂಲವಾಗುವುದಿಲ್ಲ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಪ್ರತಿಯೊಬ್ಬ ಮಾನ್ಯ ಸದಸ್ಯರು ೫ ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕಾಗಿ ವಿನಂತಿ. ಏಕೆಂದರೆ ಇವೊತ್ತಿನ ದಿವಸ ಈ ಬಿಲ್ಲು ಪಾಸ್ ಆಗಬೇಕಾಗಿದೆ. ನಾಳೆಯಿಂದ ಡಿಮ್ಯಾಂಡ್ ಶುರುವಾಗುತ್ತದೆ. ಈಗ ಮಾನ್ಯ ಸದಸ್ಯರಾದ ಚಿಮ್ಮನಕಟ್ಟಿಯವರು ಮಾತನಾಡಬೇಕು.

†ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ)—ಸನ್ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲು ೧೯೭೯ರಿಂದ ಜಾರಿಗೆ ಬಂದಿದೆ. ಈ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ. ಈ ತಿದ್ದುಪಡಿಯಲ್ಲಿ ಮುಖ್ಯವಾಗಿ ಮಕ್ಕಳ ಚಲನಚಿತ್ರಕ್ಕೆ ಹಾಗೂ ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಇದು ಸ್ವಾಗತಾರ್ಹವಾದಂತಹ ವಿಚಾರ. ಇನ್ನು ಈ ಬಿಲ್ಲಿನ ಅಮೆಂಡ್‌ಮೆಂಟ್ ಆಫ್ ಸೆಕ್ಷನ್ ೪(ಎ) ಇದರಲ್ಲಿ ನನಗೆ ಅನುಮಾನ ಬಂದಿರತಕ್ಕ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಇದರಲ್ಲಿ ವಿಶೇಷವಾಗಿ ೧೦ ಸಾವಿರ ಜನಸಂಖ್ಯೆ ಇರತಕ್ಕ ಪಟ್ಟಣದ ಚಲನಚಿತ್ರ ಮಂದಿರಗಳಿಗೆ ಹೆಚ್ಚಿನ ರಿಯಾಯಿತಿಯನ್ನು ತೋರಿಸಿದ್ದಾರೆ. ಇದು ನಿಜವಾಗಿಯೂ ಹೆಮ್ಮೆ ಪಡತಕ್ಕ ಅಂಶ. ಮೊದಲು ಈ ತಿದ್ದುಪಡಿ ಬರುವುದಕ್ಕಿಂತಲೂ ಮುಂಚೆ ಪ್ರತಿಯೊಂದು ಟಿಕೆಟ್ ಮೇಲೂ ಟ್ಯಾಕ್ಸ್ ಹಾಕುತ್ತಿದ್ದರೂ ಇದರಿಂದ ಟ್ಯಾಕ್ಸ್ ಕೊಡತಕ್ಕವರಿಗೆ ಮೋಸ ಮಾಡಲಿಕ್ಕೆ ಆಗುತ್ತಾ ಇರಲಿಲ್ಲ. ಈ ತಿದ್ದುಪಡಿ ತಂದನಂತರ Gross collection of the capacity of the theatre ಆ ತರಹ ಟ್ಯಾಕ್ಸ್ ವಸೂಲಿ ಮಾಡುತ್ತಾರೆ. ಇದರಿಂದ ಅವರು ತಪ್ಪು ಅಂಕಿ ಸಂಖ್ಯೆ ಕೊಡಲಿಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆಂದು ನನಗೆ ಸಂಶಯಾಸ್ಪದವಾಗಿದೆ. ಇನ್ನು ರೇಟ್ ಆಫ್ ಅಡ್ಮಿಷನ್ ಬಗ್ಗೆ ಹೇಳಬೇಕು ಅಂದರೆ ಸರ್ಕಾರದವರು ಒಂದು ಭಾಗಕ್ಕೆ ೨ ರೂಪಾಯಿ ರೇಟ್ ಫಿಕ್ಸ್ ಮಾಡಿದ್ದರೆ, ಈ ಥಿಯೇಟರ್‌ನವರು ಮತ್ತೆ ಒಂದು ರೂಪಾಯಿ ರೇಟ್ ಹೆಚ್ಚಿಸಿ, ೩ ರೂಪಾಯಿ ರೇಟ್ ಆಫ್ ಅಡ್ಮಿಷನ್ ತೆಗೆದುಕೊಳ್ಳುವ ಪ್ರಸಂಗವನ್ನು ನಾವು ಇವೊತ್ತು ಅನೇಕ ಥಿಯೇಟರ್‌ಗಳಲ್ಲಿ ಕಾಣುತ್ತಿದ್ದೇವೆ. ಮೊದಲು ಈ ತಿದ್ದುಪಡಿ ಬರುವುದಕ್ಕೆ ಮುಂಚೆ ಪ್ರತಿಯೊಂದು ಟಿಕೆಟ್ ಮೇಲೂ ಇನ್‌ಕಂ ಟ್ಯಾಕ್ಸ್‌ನವರು ಸೀಲ್ ಹಾಕುವ ಒಂದು ನಿರ್ಬಂಧ ನಡೆಯುತ್ತಿತ್ತು. ಈ ಒಂದು ತಿದ್ದುಪಡಿ ಬಂದನಂತರ ಟಿಕೆಟ್‌ಗಳ ಮೇಲೆ ಇನ್‌ಕಂ ಟ್ಯಾಕ್ಸ್‌ನವರು ಸೀಲ್ ಹಾಕದೇ ಇರುವ ಪರಿಸ್ಥಿತಿ ಬಂದಿದೆ. ಇದರಿಂದ ಅನೇಕ ಅನಾಹುತಗಳು ಆಗುವುದಾದರೂ ಅದಕ್ಕೆ ಆಸ್ಪದ ಮಾಡಿಕೊಡಬಾರದೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ೨೦ ಸಾವಿರ ಜನಸಂಖ್ಯೆ ಇರತಕ್ಕ ಚಲನಚಿತ್ರ ಮಂದಿರಗಳಿಗೆ ತಾವು ಅರ್ಧ ಟ್ಯಾಕ್ಸ್‌ನ್ನು ಆಕರಣೆ ಮಾಡಿದ್ದೀರಾ, ಆದರೆ ಈ 'ಎ' ಸರ್ಟಿಫಿಕೇಟ್ ಪಡೆದ ಚಲನಚಿತ್ರಗಳು ಪಟ್ಟಣಗಳಿಗೆ ಹೋದಾಗ ಅಂತೆ, ಅದನ್ನೇ ಡಬ್ಬಲ್‌ಆಕರಣೆ ಮಾಡಿದ್ದೀರಾ. ಆದುದರಿಂದ ಇದು ಸರಿಯಾಗಿ ಕಾಣುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕೆಂದು ತಿಳಿಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೫-೩೦ ಪಿ.ಎಂ.

†ಶ್ರೀಮತಿ ಎಸ್. ಪುಷ್ಪಾವತಿ (ಚಾಮರಾಜಪೇಟೆ).—ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಇವತ್ತು ಮಾನ್ಯ ಅರ್ಥಸಚಿವರು ಈ ಸಭೆಯ ಮುಂದೆ ಮನರಂಜನಾ ತೆರಿಗೆಗೆ ಸಂಬಂಧಿಸಿದಂಥ ತಿದ್ದುಪಡಿ ಮಸೂದೆಯನ್ನು ಏನು ತಂದಿದ್ದಾರೆ ಇದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಇವತ್ತು ಸರ್ಕಾರದವರು ಚಲನ ಚಿತ್ರಗಳಿಗೆ 'ಎ' ಸರ್ಟಿಫಿಕೇಟನ್ನು ಕೊಡುವ ಉದ್ದೇಶವಾದರೂ ಏನೆಂದರೆ ಆ ಚಿತ್ರಗಳಲ್ಲಿರತಕ್ಕ ಅಶ್ಲೀಲ ಸಾಹಿತ್ಯ, ಅಶ್ಲೀಲ ಸಂಗೀತ, ಅಶ್ಲೀಲ ನೃತ್ಯ, ಇಂಥವುಗಳನ್ನು ನಮ್ಮ ಮಕ್ಕಳು ನೋಡಿ ಹಾಳಾಗದಿರಲಿ, ಕೆಡದಿರಲಿ ಎಂಬುದು. ಮಾನ್ಯ ಅಧ್ಯಕ್ಷಣಿಸುವರೆ, ನಾನು ಸರ್ಕಾರದವರಿಗೆ ಹೇಳುತ್ತೇನೆ, ಅಂಥ ಅಶ್ಲೀಲ ಚಿತ್ರಗಳಿಗೆ, ''ಎ'' ಸರ್ಟಿಫಿಕೇಟ್ ಕೊಡತಕ್ಕ ಚಿತ್ರಗಳಿಗೆ ನೂರಕ್ಕೆ ನೂರರಷ್ಟು ತೆರಿಗೆಯನ್ನು ಹಾಕಿ, ಅದನ್ನು ನಾನು ಬೇಡವೆಂದು ಹೇಳುವುದಿಲ್ಲ. ಆದರೆ 'provided that the Government may have right to reduce the tax' ಎಂದು ಏನು ಹೇಳಿದ್ದೀರಿ ಇದು ಖಂಡಿತವಾಗಿ ಉಚಿತವಲ್ಲ ಇದು ಮೊದಲು ಇದ್ದಂತೆಯೇ ಇರಲಿ ಎಂದು ಕೇಳಿಕೊಳ್ಳುತ್ತೇನೆ. ಇವತ್ತು ನಾವು ಬೀದಿಗಳಲ್ಲಿ ಹೋಗುವಾಗ ಗೋಡೆಗಳ ಮೇಲೆ, ಮರಗಳ ಮೇಲೆ, ಸಿನಿಮಾದವರು ಅಂಟಿಸಿರತಕ್ಕ ಅಶ್ಲೀಲ ಪೋಸ್ಟರುಗಳನ್ನು ನೋಡುತ್ತಿದ್ದೇವೆ. ಅದರಲ್ಲಿ ನಮ್ಮ ಹೆಣ್ಣು ಮಕ್ಕಳ ಫೋಟೋಗಳನ್ನು ಅವರು ಯಾವರೀತಿ ಪ್ರದರ್ಶನ ಮಾಡುತ್ತಿದ್ದಾರೆಂದರೆ ಅದನ್ನು ವರ್ಣಿಸುವ

ಸಕ್ಕಾಗುವುದಿಲ್ಲ. ಅವರ ಮೈ ಮೇಲೆ ಬಟ್ಟೆಗಳಿಲ್ಲದಿರುವುದು, ಮಾನಭಂಗ ಮಾಡುತ್ತಿರುವುದು, ಇಂಥ ಅಶ್ಲೀಲ ಪ್ರದರ್ಶನಗಳಿರುತ್ತವೆ. ಇಂಥ ಪೋಸ್ಟರುಗಳನ್ನು ಅಂಟಿಸುವುದನ್ನು ತಾವು ಬ್ಯಾನ್ ಮಾಡಬೇಕು, ಅಂಥ ಚಿತ್ರಗಳಿಗೆ ನೂರಕ್ಕೆ ನೂರರಷ್ಟು ತೆರಿಗೆಯನ್ನು ಹಾಕಿ ಅವುಗಳು ನಡೆಯದಿರುವಂತೆ ಮಾಡಬೇಕು. ಚಿತ್ರಗಳಿಗೆ ಮಾತ್ರ ಹೆಚ್ಚು ತೆರಿಗೆ ಹಾಕುವುದಲ್ಲ, ಆ ಚಿತ್ರಗಳ ಬ್ಯಾನರ್ಸ್, ಪೋಸ್ಟರ್‌ಗಳಿಗೂ ಕೂಡ ನೂರಕ್ಕೆ ನೂರರಷ್ಟು ತೆರಿಗೆಯನ್ನು ಹಾಕಬೇಕು. ಇದರಿಂದಲಾದರೂ ಅಶ್ಲೀಲ ಚಿತ್ರಗಳ ಪಾಗೂ ಪೋಸ್ಟರ್‌ಗಳ ಹಾವಳಿ ಕಡಿಮೆಯಾಗಬಹುದು. ಆಗ ಜನರು ಅದರಲ್ಲೂ ನಮ್ಮ ಹೆಣ್ಣು ಮಕ್ಕಳು ನಿಮ್ಮನ್ನು ಹಾಡಿ ಹೊಗಳಬಹುದು. ಸನ್ಮಾನ್ಯ ಅಧ್ಯಕ್ಷಣಿಯವರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ. ಈ ಸಭೆಯ ಮಹಿಳಾ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ರಚಿಸಿ ಅವರು ಹೇಳಿದ ಚಿತ್ರಗಳಿಗೆ ತೆರಿಗೆ ವಿನಾಯಿತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಆ ಸಮಿತಿ ರಚನೆಯಾಗಲಿ

(ಶ್ರೀಮತಿ ಸುಮತಿ ಮಡಿಮನ್‌ರವರು ಅಧ್ಯಕ್ಷ ಪೀಠದಲ್ಲಿದ್ದರು)

(ನಗು)

ಶ್ರೀಮತಿ ಎಸ್. ಪ್ರಮಿಳಾ.—ಮಾನ್ಯ ಅಧ್ಯಕ್ಷಿಣಿಯವರೆ, ಮೊನ್ನೆ ದಿವಸ ನಾನು ನೋಡಿದಂಥ ಒಂದು ದೃಶ್ಯವನ್ನು ಇಲ್ಲಿ ಉದಾಹರಣೆಗಾಗಿ ಹೇಳಬಯಸುತ್ತೇನೆ, ಸುಮಾರು ೫–೬ ಜನ ಕಳ್ಳರು ಕಾರುಗಳನ್ನು ಅಪಹರಿಸಿ ಪೋಲೀಸರಿಗೆ ಸಿಕ್ಕಿ ಬಿದ್ದರು. ಆಗ ಅವರನ್ನು ಕೇಳಿದ್ದಕ್ಕೆ ಏನು ಹೇಳಿದರು ಎಂದರೆ 'ನಾವು ಸಿನಿಮಾದಲ್ಲಿ ಕಳ್ಳತನ ಮಾಡುವ ದೃಶ್ಯಗಳನ್ನು ನೋಡಿದ್ದರಿಂದ ಅದರಂತೆ ನಾವೂ ಮಾಡಬೇಕೆಂದು ಸ್ಫೂರ್ತಿ ಬಂದಿದ್ದರಿಂದ ಈ ರೀತಿ ಮಾಡಿದೆವು' ಎಂದು ಹೇಳಿಕೆಯನ್ನು ಕೊಟ್ಟರು. ಇಂಥ ಚಿತ್ರಗಳನ್ನು ಹೆಗೆದು ನಮ್ಮ ಮಕ್ಕಳಿಗೆ ತೋರಿಸಿ ಈ ರೀತಿ ಕಳ್ಳತನ ಮಾಡುವುದಕ್ಕೆ ದಾರಿ ತೋರಿಸಿಕೊಟ್ಟಹಾಗಾಗುತ್ತಿದೆ ವೀರರಾಣಿ ಕಿತ್ತೂರ ಚೆನ್ನಮ್ಮ ಹುಟ್ಟಿದ ಈ ನಾಡಿನಲ್ಲಿ ಶೌರ್ಯ ಪ್ರದರ್ಶನ ಮಾಡತಕ್ಕ ಚಿತ್ರಗಳನ್ನು ತಯಾರಿಸಿ ಮಕ್ಕಳಿಗೆ ತೋರಿಸದೆ ಇಂಥ ಅಶ್ಲೀಲ ಚಿತ್ರಗಳನ್ನು ತೋರಿಸುವುದು ಸರಿಯಲ್ಲ. ಕ್ಯಾಬರೆ ನೃತ್ಯವನ್ನು ಬ್ಯಾನ್ ಮಾಡಿರುವುದಾಗಿ ತಾವು ಹೇಳುತ್ತಿದ್ದೀರಿ. ಆದರೆ ಚಿತ್ರಗಳಲ್ಲಿ ಕ್ಯಾಬರೆ, ಕುಡಿತ, ಮಾನಭಂಗ, ಕಳ್ಳತನ, ಇವುಗಳಲ್ಲಿ ಒಂದಿಲ್ಲೊಂದು ಇದ್ದೇ ಇರುತ್ತವೆ ಇಂಥ ಸನ್ನಿವೇಶಗಳು ಚಿತ್ರಗಳಲ್ಲಿ ಇಲ್ಲದಿದ್ದರೆ ಚಿತ್ರಗಳೇ ಓಡುವುದಿಲ್ಲವೆಂಬ ಭಾವನೆ ಬೆಳೆದು ಬಂದಿದೆ. ಚಿತ್ರಗಳಿಗೆ ಹಾಕತಕ್ಕ ತೆರಿಗೆ 'ಮನರಂಜನಾ ತೆರಿಗೆ ಅಲ್ಲ, ಮನವನ್ನು ಕಲುಷಿತಗೊಳಿಸುವುದನ್ನು ಹತೋಟಿಯಲ್ಲಿಡಲು ಹಾಕುವ ತೆರಿಗೆ ಎಂದು ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷಿಣಿಯವರೆ, ಅಶ್ಲೀಲ ಚಿತ್ರಗಳಿಗೆ ನೂರಕ್ಕೆ ನೂರರಷ್ಟು ತೆರಿಗೆ ಹಾಕಿ ಅವು ನಡೆಯದಿರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಂತರಾಷ್ಟ್ರೀಯ ಮಕ್ಕಳ ವರ್ಷವಿದ್ದಾಗಲೂ ಮಕ್ಕಳಿಗೆ ಸಂಬಂಧಪಟ್ಟ ಚಿತ್ರಗಳಿಗೆ ತಯಾರಿಕೆಗಾಗಿ ಆಗಲಿ ಅಥವಾ ಮಕ್ಕಳಿಗೆ ಸಂಬಂಧಪಟ್ಟ ಇತರೆ ಚಟುವಟಿಕೆಗಳಿಗಾಗಲಿ ತಾವು ಯಾವ ಒಂದು ನೀತಿಯನ್ನೂ ಇಟ್ಟುಕೊಂಡಿಲ್ಲವೆಂದು ಇಲ್ಲಿ ಕಂಡುಬರುತ್ತದೆ. ಇದರ ಬಗ್ಗೆ ಕೂಡ ಮಾನ್ಯ ಸಚಿವರು ತಮ್ಮ ಗಮನ ಹರಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

(Mr Speaker in the Chair)

† ಶ್ರೀ ಜಿ.ಕೆ. ತಕ್ಕೇಡ್ (ಪರಾಸ್‌ಗಡ್). – ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥಮಂತ್ರಿಯವರು ಈಗ ಸಭೆಯ ಮುಂದೆ ತಂದಿರತಕ್ಕ ಮನರಂಜನೆ ತೆರಿಗೆಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ಏನಿದೆ ಇದು ಬಹಳ ಸ್ವಾಗತಾರ್ಹವಾದುದು. ಈಗಾಗಲೇ ನನ್ನ ಅನೇಕ ಸ್ನೇಹಿತರು ಇದರ ಬಗ್ಗೆ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಹೆಚ್ಚು ಮಾತನಾಡದೆ ಕೇವಲ ಒಂದೆರಡು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ. ತಾವು ಸೆಕ್ಷನ್ ೪ ರಲ್ಲಿ ಏನು ಹೇಳಿದ್ದೀರಿ ಎಂದರೆ: "The State Government, may, by order make for such period not exceeding six weeks in the case of a film in a regional language

of the State of the Karnataka..." ಇಲ್ಲಿ .. ೬ ವಾರಗಳು" ಎಂದು ತಾವು ಏನು ಹೇಳಿದ್ದೀರಿ ಇದು ಬಹಳ ಕಡಿಮೆಯಾಗುತ್ತದೆ ಇದನ್ನು ಕನಿಷ್ಟ. ೧೦ ವಾರಗಳು ಎಂದು ಆದರೂ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ. ಏಕೆಂದರೆ ನಮ್ಮ ಪಕ್ಕದ ರಾಜ್ಯಗಳಿಂದ ಆಂಧ್ರ ತಮಿಳ್ನಾಡು, ಮಹಾರಾಷ್ಟ್ರಗಳಲ್ಲಿ ಅಲ್ಲಿನ ಪ್ರದೇಶ ಭಾಷಾ ಚಿತ್ರಗಳನ್ನು ಇಂತಿಷ್ಟು ದಿವಸಗಳು ನಡೆಸಬೇಕೆಂದು ಮಾಡಿದ್ದಾರೆ. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಮಾಡಬೇಕಾಗಿದೆ. ಇವತ್ತು ಕನ್ನಡ ಚಿತ್ರಗಳ ಪರಿಸ್ಥಿತಿ ಯಾವರೀತಿ ಇದೆಯೆಂದು ಉದಾಹರಣೆಗೆ ಹೇಳುವುದಾದರೆ ಈ ಬೆಂಗಳೂರನ್ನೇ ತೆಗೆದುಕೊಂಡರೆ, ಇಲ್ಲಿ ತಮಿಳು, ತೆಲುಗು ಹಿಂದಿ, ಮರಾಠಿ ಮುಂತಾದ ಚಿತ್ರಗಳೇ ಬಹಳವಾಗಿ ಪ್ರದರ್ಶಿತವಾಗುತ್ತಿವೆಯೇ ಹೊರತು ಕನ್ನಡ ಚಿತ್ರಗಳಿಗೆ ಅವಕಾಶವೇ ಇಲ್ಲವಾಗಿದೆ. ಇವತ್ತು ೨೦ ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗಳಲ್ಲಿ ಕನ್ನಡ ಚಿತ್ರಗಳಿಗೆ ರಿಯಾಯಿತಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಈ ಒಂದು ರಿಯಾಯಿತಿ ಎಲ್ಲಕಡೆಗೂ ಅನ್ವಯಿಸುವಂತಿರಬೇಕು. ಅಲ್ಲದೆ ಬೇರೆ ಭಾಷೆ ಚಿತ್ರಗಳಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ತೆರಿಗೆ ಹಾಕಬೇಕು ಮತ್ತು ಕನ್ನಡ ಚಿತ್ರಗಳಿಗೆ ಯಾವ ರೀತಿ ತೆರಿಗೆಗಳನ್ನೂ ಹಾಕಬಾರದು. ಇವತ್ತು ಶೈಕ್ಷಣಿಕ ದೃಷ್ಟಿಯಿಂದ, ಧಾರ್ಮಿಕ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಿಂದ, ನೈತಿಕ ದೃಷ್ಟಿಯಿಂದ ತಯಾರಾಗಿಂತಕ್ಕ ಚಿತ್ರಗಳಿಗೆ ರಿಯಾಯಿತಿ ತೋರಿಸುತ್ತಿದ್ದೀರಿ ಇದು ನಿಜವಾಗಿಯೂ ಸ್ವಾಗತಾರ್ಹವಾದುದು. ಸಿನಿಮಾ ಮಂದಿರದವರಿಗೆ ಲೈಸೆನ್ಸ್ ಕೊಡುವಾಗ ವರ್ಷದಲ್ಲಿ ಇಂತಿಷ್ಟು ದಿವಸ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಲೇಬೇಕೆಂದು ತಿಳಿಸಬೇಕು. ಕನ್ನಡ ಚಿತ್ರಗಳಿಗೆ ೬ ವಾರಗಳ ಕಾಲ ತೆರಿಗೆ ವಿನಾಯಿತಿ ಮಾಡಬೇಕೆಂದಿರುವುದನ್ನು ೧೦ ವಾರಗಳಿಗೆ ಎಂದು ಮಾಡಬೇಕು. ಬೇರೆ ಭಾಷೆ ಚಿತ್ರಗಳಿಗೆ ಎಷ್ಟು ತೆರಿಗೆಯನ್ನು ಬೇಕಾದರೂ ಹಾಕಿ ಆದರೆ ಕನ್ನಡ ಚಿತ್ರಗಳಿಗೆ ಮಾತ್ರ ಯಾವ ತೆರಿಗೆಯನ್ನೂ ಹಾಕಬೇಡಿ. ಈ ರೀತಿ ಮಾಡಿದರೆ ನಮ್ಮ ರಾಜ್ಯದಲ್ಲಿ ಕನ್ನಡಕ್ಕೆ ಪುರಸ್ಕಾರ ಸಿಕ್ಕುತ್ತದೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಅರ್ಥ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI A. LAXMISAGAR (Chickpet).—Sir, doubling the tax in the case of 'A' films though intended to curb cinema-goers from going to films which contain violence, crime and horror, in my submission, will not serve the purpose for which it is intended. People who are interested in such crime, violence and horror, would certainly make it a point to visit them irrespective of the tax that is levied. Perhaps on the other hand, it would make them feel that it should be visited by them. I have seen the students of the Law College making it a point to visit all 'Adults Only' Pictures. Doubling of the levy is too harsh and it is too steep. It is better the tax burden is reduced by half. This certification of films by the Board of Censors as Film 'A' is not based on any intelligible creterion. Films which predominantly contain violence, horror and crime are included as also films like SAMSKARA, VAMSAVRIKSHA, SPANDANA and GHATASHRADDA. These have also been categorised as 'A' films. I would like to bring your kind notice, Sir, that all these films have won State, national and international acclaim. They have also been responsible to put the State of Karnataka in the fore-front in film production in the entire country. This has brought to the fore-front a new trend of off-beat films in our State. This pre-eminent position was occupied by the State of BENGAL SOME YEARS ago and Karnataka has now stolen a march for producing such thought-peovoking, and purposeful films. These films are now exempted from

entertainment tax and other taxes. Now, particularly, as a result of the encouragement given by the State Government and tax exemption, we were able to produce such master-pieces. Now as a result of including thematic films which do not contain violence, sex or horror in this, the present tax levied would also be applied to them. some of these off-beat films have not been able to make both ends meet and earn even the money that was spent for their production. The producers who produced these adult thematic films are not able to get back even the investment. They do not have any rural appeal and in the rural areas, they have not been able to get the encouragement they deserve. Some of the films have only a limited local market. Kannada films are mostly confined to Karnatka whereas films in other languages like Hindi, Telugu, Tamil, English and Malayalam-have a wider market. Therefore, these films reqire the protection that would subserve the interests of off-beat film-making in our State. The amendment suggested for the protection of these films is vague and it has sought to create a committee to follow certain prescribed rules with the purpose of regulating exemption for it from any part of the entertainment tax. I would suggest that it is better an expert committee is constituted instead of leaving this matter to a committee constitutrd by the Government, so that the committee would serve the purpose which is ought to serve. Then the concession you think you should give under the amendment to Section 7 is applicable to all films You must expressly provide this concession to Kannada films, particula ly films of adult, thematic value, so that your intention w.uld be fully served. This concession may also be available to films in other languages, in which case, Kannada films would meet with stiff. competition and such off-beat films may not be available in future.

Therefore, there is every need to make a specific express provision for the protection of these off-beat films. That is my submission and suggestion.

SRI PRABHAKAR TELKAR (Chitapur).—I welcome the Karnataka Entertainments Tax (Amendment) Bill, 1979 for the reason that the Government has suddenly thought of helping the Kannada Films which are producing in Karnataka. I had already submitted on the Calling Attention Notice about the representations given by the Kannada Film Producers. There are Kannada Films in which there is no sex, obscenity or vulgarity as we see in the films produced in some other States but still, such of the Kannada Films have been granted "A" Certificate, only on the basis of theme. Kannada Films like 'SAMSKARA", & "GHATASHRADHA have been given national wards. Recently, national award has been given to another Kannada

film called "GRAHANA", But, "A" Certificate has been given to film. The Government of Karnataka intends to help the Kannada Films by levying this 100% tax over these Kannada Films where "A" Certificate has been given but I would like to say that there are Kannada Films where "A" Certificate has been given even though there is on vulgarity, sex or obscenity. Therefore, great injustice would have been caused to such films. I welcome the Governments move to amend the Act to encourage the Kannada Film industry. Sir, Amendment of Section 7(b) reads as follows :—

"(b) the entertainment in a cinematograph show of a film,—

(i) which has secured an award granted either by the Central Government, or the State government

(ii) which has been certified by any institution recognised by the State Government as an educational film or as a children's film;

(iii) which, having regard to the language, theme, artistic value and such other matters as may be prescribed, has been certified by a committee constituted by the State Government for the purposes of this clause as a film which may be exempted from payment of tax either in full or in part..."

The Government may think of exempting such of the Kannada Films which have been granted "A" Certificate by the Central Censor Board but containing on scenes of vulgarity or obscenity or sex. I would like to mention here that if this Bill would not have been introduced and exemption to Kannada films from the payment of entertainments tax would have been continued, there would have been several writ petitions in the High Court and the Government would have to face so many difficulties. I therefore welcome this measure.

One more think I would like to mention. Regrading the Committee that is to be constituted under this Act, as has been said by my other learned colleagues, the Committee should consists of experts in that industry. If the experts in that industry are there in that Committee, they would definitely select the Kannada films which have been granted "A" Certificate even though there is no obscenity vulgarity or sex but only on theme, for purposes of giving exemption from payment of tax.

With these few words, I once again welcome this Karnataka Entertainments Tax (Amendment) Bill, 1979 and thank the Chair and conclude my speech.

†ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಈ ವರ್ಷದಿಂದ ನಾವು ಕರ್ನಾಟಕದಲ್ಲಿ ಒಂದು ಪ್ರಗತಿದಾಯಕವಾದ ಫಿಲ್ಮ್ ಪಾಲಿಸಿಯನ್ನು ತಂದು ಅದನ್ನು ದೇಶದ ಮುಂದಿಟ್ಟಿದ್ದೇವೆ. ಮೊದಲನೆಯದಾಗಿ ಕರ್ನಾಟಕದಲ್ಲಿ ಕನ್ನಡ ಚಲನಚಿತ್ರಗಳಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕು ಹಳ್ಳಿಯ ಜನರೂ ಹೆಚ್ಚು ಹೆಚ್ಚು ಕನ್ನಡ ಚಿತ್ರಗಳನ್ನು ನೋಡಬೇಕು ಎಂಬ ದೃಷ್ಟಿಯಿಂದ ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಗ್ರಾಮಗಳಲ್ಲಿ ಪ್ರದರ್ಶಿತವಾಗತಕ್ಕ ಚಲನಚಿತ್ರಗಳಿಗೆ ಮನರಂಜನೆ ತೆರಿಗೆಯಲ್ಲಿ ಶೇಕಡ ೫೦ರಷ್ಟು ಕಡಿಮೆ ಮಾಡಿದ್ದೇವೆ. ಇದರಿಂದ ನಾವು ಕೊಡುತ್ತಿದ್ದ ತೆರಿಗೆ ರಿಯಾಯಿತಿ ಬರೀ ಪಟ್ಟಣದಲ್ಲಿರತಕ್ಕ ಜನರಿಗೆ ಮಾತ್ರ ದೊರೆಯುತ್ತಿದ್ದುದು ಕಡಿಮೆಯಾಗಿ ಹಳ್ಳಿಯಲ್ಲಿರತಕ್ಕ ಜನರಿಗೂ ಇದರ ಲಾಭ ಸಿಗುತ್ತದೆ. ಕನ್ನಡ ಚಲನಚಿತ್ರಗಳ ನಿರ್ಮಾಣಕ್ಕೆ, ಹಂಚಿಕೆದಾರರಿಗೆ, ಮತ್ತು ಅದನ್ನು ನೋಡುವವರಿಗೂ ಅನುಕೂಲವಾಗುವಂಥ ಒಂದು ನೀತಿಯನ್ನು ನಿಯಮಗಳನ್ನು ಇಟ್ಟಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು ೧೦೨೪ ಚಿತ್ರಮಂದಿರಗಳಿವೆ. ಅದರಲ್ಲಿ ೬೪೯ ಚಿತ್ರಮಂದಿರಗಳು ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರತಕ್ಕ ಪ್ರದೇಶಗಳಲ್ಲಿ ಇವೆ. ಅಂದರೆ ಶೇಕಡ ೬೫ ರಷ್ಟು ಚಿತ್ರ ಮಂದಿರಗಳು ಗ್ರಾಮಾಂತರ ಪ್ರದೇಶಗಳಲ್ಲಿವೆ. ಇಂಥ ಪ್ರದೇಶಗಳಲ್ಲಿರತಕ್ಕ ಜನರಿಗೆ ಕನ್ನಡ ಚಲನಚಿತ್ರ ಗಳನ್ನು ನೋಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಎರಡನೆಯದಾಗಿ ಹೇಳುವುದಾದರೆ ಇಡೀ ದೇಶದ ಮುಂದೆ ಒಂದು ಹೊಸ ನೀತಿಯನ್ನು ಇಟ್ಟಿದ್ದೇವೆ. ಸೆನ್ಸಾರ್ ಬೋರ್ಡಿನವರು ಚಿತ್ರಕ್ಕೆ ಯಾವ ಸರ್ಟಿಫಿಕೇಟನ್ನು ಕೊಡುತ್ತಾರೋ ಅದರ ಆಧಾರದ ಮೇಲೆ ನಾವು ಕರವನ್ನು ಹಾಕಿದ್ದೇವೆ. ಅವರು 'ಎ' ಸರ್ಟಿಫಿಕೇಟ್ ಯಾವ ಚಿತ್ರಕ್ಕೆ ಕೊಡುತ್ತಾರೋ ಅದಕ್ಕೆ ಎರಡುಪಟ್ಟು ತೆರಿಗೆಯನ್ನು ಹಾಕಿದ್ದೇವೆ. ಈ ರೀತಿ ನಾವು ತೆಗೆದುಕೊಂಡಿರುವ ನೀತಿಯನ್ನು ಮೆಚ್ಚಿ ಮಹಾರಾಷ್ಟ್ರ ಮತ್ತು ತಮಿಳು ನಾಡುನಿಂದ ಮೆಚ್ಚುಗೆ ಬಂದಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದಿರತಕ್ಕ ಒಂದೇ ಒಂದು ವಾಕ್ಯವನ್ನು ನಾನು ಸಭೆಯ ಮುಂದೆ ಓದುವುದಕ್ಕೆ ಇಚ್ಛಿಪಡುತ್ತೇನೆ. ಅದರಲ್ಲಿ ಏನು ಹೇಳಿದ್ದಾರೆ ಎಂದರೆ. They have been praising our various new and bold policies.

Under the Heading "Hindustani Andolan-Indians in Service of India", it has been stated as follows;—

"We compliment the Katnataka Government for taking one small but bold step in the right direction by enhancing the Entertainment Tax in all "A" movies. They need all the Suppart Let us give them.

While we appeal to our Union Mininster for Information and Broadcasting to instruct the Censor Board, to give "A" certificate to all movies in which violence, crime and sex is used without any justification, we urge the Chief Ministers of all the States to follow the example of Karnataka. This is the least that can be done to-day to prevent contamination of the young minds."

೬-೦೦ ಪಿ.ಎಂ.

ಈ ರೀತಿಯ ಮೆಚ್ಚಿಗೆ ಎಲ್ಲಾ ಕಡೆಯಿಂದ ನಮಗೆ ಬರುತ್ತಿವೆ. ಸೆನ್ಸಾರ್ ಬೋರ್ಡ್ ಎಂಬುದಾಗಿ ಏನೂದು ಬೋರ್ಡ್ ಇದೆ. ಅದು ದೇಶದಲ್ಲಿರುವ ಮುಖ್ಯವಾದ ಒಂದು ಸಂಸ್ಥೆ. ಅವರದ್ದೇ ಆದರ ಕ್ರೈಟೀರಿಯಾ ಇದೆ. ಅವರ ಗೈಡ್‌ಲೈನ್ಸ್ ಇದೆ. ಕೆಲವು ಸಿನಿಮಾಕ್ಕೆ 'ಎ' ಸರ್ಟಿಫಿಕೇಟ್ ಕೊಡುತ್ತಾರೆ. ಆ ರೀತಿ 'ಎ' ಸರ್ಟಿಫಿಕೇಟ್ ಕೊಡುವುದು ತಪ್ಪು ಅಥವಾ ಸರಿಯೋ ಎಂಬುದನ್ನು ನಾವು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಒಂದು ಕಮಿಟಿಯ ಸಬ್ಜಕ್ಟ್ ಆಗಿರುತ್ತದೆ. ದೇಶದಲ್ಲಿರುವ ಒಂದು ದೊಡ್ಡ ಸಂಸ್ಥೆ ಎಂಬುದಾಗಿ ನಾವು ಹೇಳುವಾಗ ಅವರು ಮಾಡುವ ಕೆಲಸ ಆಗಿದೆ, ಹೀಗಿದೆ, ಮತ್ತೆ ಸೆನ್ಸಾರ್ ಬೋರ್ಡ್‌ನವರು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂಬುದಾಗಿ ಹೇಳುವುದು ಸರಿಯಲ್ಲ. ಆ ರೀತಿ ಹೇಳಬೇಡಿ. ಅದೇ ರೀತಿಯಲ್ಲಿ ಸಬ್ಜಕ್ಟ್‌ಗೆ ಬದಲಾಗಿ ಭಾಷೆ ಬಹಳಷ್ಟು ಅಬ್ಜಕ್ಟ್ ಆಗುತ್ತದೆ.

ಮಾನ್ಯ ಸದಸ್ಯರಾದ ಮಿಸ್. ಪ್ರಮಿಳಾರಂ ಹೇಳಿದ ಮೆಲೋಡಿಯಸ್‌ಗೂ, ಮಾತ್ತೆ ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಿಸಾಗರ್‌ರವರು ಹೇಳಿದ ಮೆಲೋಡಿಯಸ್‌ಗೂ ಬಹಳ ವ್ಯತ್ಯಾಸ ಕಂಡು ಬರುತ್ತದೆ. ನಾವು ಎಷ್ಟೇ ಟ್ಯಾಕ್ಸ್ ಹಾಕಿದರೂ ಕೂಡ ಜನ ನೋಡುವವರು ನೋಡೇ ನೋಡುತ್ತಾರೆ. ಅದಕ್ಕಾಗಿ ಅಂತಹ ಚಿತ್ರಗಳಿಗೆ ಟ್ಯಾಕ್ಸ್ ಹಾಕಲೇಬೇಕೆಂಬುದಾಗಿ ಮಾನ್ಯ ಸದಸ್ಯರಾದ ಮಿಸ್ ಪ್ರವೀಳಾ ರವರಂ ಹೇಳಿದ ರೀತಿಯಲ್ಲಿ ನಾವು ಡಬಲ್ ಟ್ಯಾಕ್ಸ್ ಹಾಕಿದ್ದೇವೆ. ಇನ್ನೂ ಕೂಡ ಇದನ್ನು ಹೆಚ್ಚು ಮಾಡಬೇಕೋ ಅಥವಾ ಕಡಿಮೆ ಮಾಡಬೇಕೋ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಬಹಳಷ್ಟು ಜನ ಇದು ಬಹಳ ಜಾಸ್ತಿ ಸ್ವಲ್ಪ ಕಡಿಮೆ ಮಾಡಬೇಕೆಂಬ ಸಲಹೆಯನ್ನೂ ಕೂಡ ಕೊಟ್ಟಿದ್ದಾರೆ. ಅದಕ್ಕಾಗಿ ನಾವು ಅಧಿಕಾರವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಮಾನ್ಯ ಬೊಮ್ಮಾಯಿಯವರು ಸರ್ಕಾರ ಅಧಿಕಾರವನ್ನು ತೆಗೆದುಕೊಳ್ಳ ಬಾರದಂದು ಹೇಳಿದರು. ಅದರಂತೆ ನಾವು ಪ್ರತಿಯೊಂದು ಸಿನಿಮಾವನ್ನು ನೋಡಿ ಅದಕ್ಕೆ 'ಎ' ಸರ್ಟಿಫಿಕೇಟ್ ಕೊಡುವುದು ಕಷ್ಟವಾಗುತ್ತದೆ. ಇದರಿಂದ ಪ್ರತಿಯೊಂದು ಊರಿಗೂ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಬೇಕಾಗುತ್ತದೆ. ಅಥವಾ ಇದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಬೇಕಾಗುತ್ತದೆ. ಆ ರೀತಿ ಕಮಿಟಿಯಂನ್ನು ಮಾಡಿದರೂ ಕೂಡ ಎಲ್ಲವನ್ನೂ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ 'ಎ' ಸಿನಿಮಾಗಳಿಗೆ ಮಾಡಬೇಕೇ ಅಥವಾ ಹೆಚ್ಚು ಮಾಡಿರುವಂತೆ ಇರಬೇಕೆಂಬುದನ್ನು ತೀರ್ಮಾನ ಮಾಡಬೇಕಾಗಿದೆ ಅದಕ್ಕೋಸ್ಕರ ಸರ್ಕಾರ ಆ ಅಧಿಕಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ಸರಿಯಾದ ರೀತಿಯಲ್ಲೇ ಇದನ್ನು ಮಾಡಿದ್ದೇವೆ. ನಮಗೆ ಇನ್ನೂ ಹಲವಾರು ಕಾರಣಗಳಿವೆ. ಮತ್ತೆ ಮಿಸ್. ಪ್ರಮೀಳಾರವರು ಹೇಳಿದ ರೀತಿಯಲ್ಲಿ ನಾವು ಎಷ್ಟು ಟ್ಯಾಕ್ಸ್‌ನ್ನು ಹೆಚ್ಚು ಮಾಡಿದರೂ ಜನ ಹೋಗುವವರು ಹೋಗೇ ಹೋಗುತ್ತಾರೆ. ಈ ಎಲ್ಲ ಅಂಕಿ ಅಂಶಗಳನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಟ್ಯಾಕ್ಸ್‌ನ್ನು ಹೆಚ್ಚು ಮಾಡಬೇಕೋ ಮಾಡಬಾರದೋ ಎಂಬ ತೀರ್ಮಾನಕ್ಕೆ ನಾವು ಇನ್ನೂ ಬರಲಿಲ್ಲ. ವಿಚಾರ ಮಾಡುತ್ತಿದ್ದೇವೆ. ಅದಕ್ಕಾಗಿ ನಾವು ಸ್ವಲ್ಪ ಅಧಿಕಾರವನ್ನು ಇಟ್ಟುಕೊಂಡು ಈ ಬಗ್ಗೆ ವಿಚಾರ ಮಾಡಬೇಕಾಗಿದೆ.

ಎರಡನೆಯದಾಗಿ ಮಾನ್ಯ ಬೊಮ್ಮಾಯಿಯವರು ಕಂಪೋಸಿಟ್ ಸ್ಕೀಂನ್ನು ತಂದಿದ್ದೀರಿ ಎಂಬುದಾಗಿ ಹೇಳಿದ್ದಾರೆ. ನಿಜ ಮಾಡಿದ್ದೇವೆ. ಅದು ಏಪ್ರಿಲ್ ತಿಂಗಳಿಂದ ಜಾರಿಗೆ ಬರುತ್ತದೆ. ಈ ಥಿಯೇಟರಿನ ಕಲೆಕ್ಷನ್‌ನಲ್ಲಿ ಕನಿಷ್ಟ ೧೨ ಪರ್ಸೆಂಟ್ ಮಾತ್ರ ನಾವು ತೆಗೆದುಕೊಳ್ಳುತ್ತೇವೆ. ಅದಕ್ಕಾಗಿ ಈಗ ಇರುವ ಪಾಲಿಸಿ ಪ್ರಕಾರ ೬೪೯ ಥಿಯೇಟರುಗಳು ೪೦೦ಕ್ಕಿಂತ ಹೆಚ್ಚು ೧೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮಗಳಲ್ಲಿವೆ. ಪ್ರತಿಯೊಂದು ನಮ್ಮ ಅಧಿಕಾರಗಳು ಹೋಗಿ, ಎಷ್ಟ ಕಲೆಕ್ಷನ್ ಆಗಿದೆ ಎಂಬುದರ ಬಗ್ಗೆ ಅವರ ಬಿಲ್ಲನ್ನು ನೋಡುವುದಕ್ಕಾಗುವುದಿಲ್ಲ. ಸಿಂಪ್ಲಿಫೈ ಮಾಡುವುದಕ್ಕೋಸ್ಕರ ಈ ಒಂದು ಸ್ಕೀಂನ್ನು ತಂದಿದ್ದೇವೆ ಈಗ ಇರುವ ಸ್ಕೀಂ ಪ್ರಕಾರ ಲಾಸ್ ಆಗದ ಹಾಗೆ ತನ್ನ ಕೆಲಸವನ್ನು ನಡೆಸಿಕೊಂಡು ಹೋಗುತ್ತಾರೆ. ೪೦೦ ೫೦೦ ಥಿಯೇಟರ್‌ಗಳನ್ನೂ ಕೂಡ ಚಕ್ ಮಾಡುವುದಕ್ಕಾಗುವುದಿಲ್ಲ. ನೇರವಾಗಿ ನಮಗೆ ೧೨ ಪರ್ಸೆಂಟ್ ಕೊಟ್ಟುಬಿಡಿ ಎಂಬುದಾಗಿ ಹೇಳಿದ್ದೇವೆ. ಅದಕ್ಕೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಇದರಿಂದ ನಮಗೆ ೩೫ ಸಾವಿರ ರೂಪಾಯಿ ಮಾತ್ರ ಮನರಂಜನೆ ತೆರಿಗೆಯಿಂದ ಬರುತ್ತದೆ. ಈ ರೀತಿ ನಾವು ಮಾಡಿದ್ದರಿಂದ ಬಹಳಷ್ಟು ಥಿಯೇಟರ್‌ಗೆ ಆದಾಯ ಬರುವುದಕ್ಕೆ ಸಾಧ್ಯವಾಗಿದೆ. ಮನರಂಜನೆ ತೆರಿಗೆಯನ್ನು ಕೊಡದಹಾಗೆ ಮಾಡುವುದಕ್ಕೆ ಅವಕಾಶ ಇದ್ದರೆ ಅಂತಹವರ ಮೇಲೆ ಅಧಿಕಾರಿಗಳು ಎರಾಸ್‌ಮೆಂಟ್ ಮಾಡಬಾರದು ಎಂಬ ದೃಷ್ಟಿಯಿಂದ ಈ ಒಂದು ಸ್ಕೀಂನ್ನು ಜಾರಿಗೆ ತಂದಿದ್ದೇವೆ. ಗುಜರಾತಿನಲ್ಲಿ ಸಬ್ಸಿಡಿಯನ್ನು ಕೊಡುವುದಿಲ್ಲವೆಂದು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ. ಬೇರೆಯವರು ಮನರಂಜನೆ ತೆರಿಗೆಯನ್ನು ಹಾಕಿದ್ದು ಸರಿ ಎಂಬುದಾಗಿ ಹೇಳಿದ್ದಾರೆ ಮಾನ್ಯ ಶಾಮಣ್ಣನವರು ಅದನ್ನು ತಪ್ಪಿಸಿದರೆ ಮುನಿಸಿಪಾಲಿಟಿಗೆ ಬರತಕ್ಕಂತಹ ಹಣ ಹೋಗಿಬಿಡುತ್ತದೆ ಎಂಬುದಾಗಿ ಹೇಳಿದ್ದಾರೆ. ನಾವು ಈಗ ೯೦ ಭಾಗವನ್ನು ಅವರಿಗೆ ಕೊಡುತ್ತೇವೆ. ೧೦ ಭಾಗವನ್ನು ನಾವು ಇಟ್ಟುಕೊಳ್ಳತ್ತಿದ್ದೇವೆ. ಸರ್‌ಚಾರ್ಜನ ಜೊತೆಗೆ ಇದನ್ನು ಮುನಿಸಿಪಾಲಿಟಿಗಳಿಗೆ ಕೊಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಆಕ್ಟ್‌ಯಿಂದ ಬೇಕಾದಷ್ಟು ಹೋಗಿದೆ. ಇದರ ಜೊತೆಗೆ ಇದು ಹೋಗಲಿ ಎಂಬುದಾಗಿ ಹೇಳುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.—ಎರಡನ್ನೂ ಕೊಡುತ್ತೇವೆ.